ಡಾ॥ ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY
UNIVERSITY
Jnanajyothi Central College Campus, Dr. B.R. Ambedkar Veedhi, Bengaluru – 560001.
Ph. No. 080-22131385 E-Mail ID: registrar@bcu.ac.in

**ವಿಷಯ:** ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಆವರಣದ ಹೆಸರನ್ನು "ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಎಂದು ಮುಂದುವರೆಸುವ ಕುರಿತು.

**ಉಲ್ಲೇಖ:**
01. ದಿನಾಂಕ 28.02.2024ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ.
02. ಅಧಿಸೂಚನೆ ಸಂಖ್ಯೆ/ಬೆಂ.ನ.ವಿ/ಕು.ಕ/ಜ್ಞಾನಜ್ಯೋತಿ/03/2023–24 ದಿನಾಂಕ 21.03.2024.
03. ಜೀವರಸಾಯನಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ವಿ.ಆರ್. ದೇವರಾಜ್‌ರವರ ಮನವಿ ಪತ್ರದ ದಿನಾಂಕ 29.01.2026.
04. ಮರುನಾಮಕರಣ ಸಮಿತಿ ರಚಿಸಿದ ಅಧಿಸೂಚನೆ ದಿನಾಂಕ 05.03.2026.
05. ದಿನಾಂಕ 22.04.2026 ಮತ್ತು 18.06.2026 ರಂದು ಜರುಗಿದ ಸಮಿತಿ ಸಭೆಯ ನಡವಳಿ.
06. ದಿನಾಂಕ 01.08.2026ರಂದು ಜರುಗಿದ ಸಿಂಡಿಕೇಟ್ ಸಭೆ ನಿರ್ಣಯ.
07. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 11.09.2026.

*****

**ಪ್ರಸ್ತಾವನೆ:**

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಉಲ್ಲೇಖ(01)ರ ದಿನಾಂಕ 28.02.2026ರ ಸಿಂಡಿಕೇಟ್ ಸಭೆಯ ನಿರ್ಣಯದ ಮೇರೆಗೆ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜ್ ಆವರಣವನ್ನು "ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಎಂದು ಉಲ್ಲೇಖಿತ(02)ರಲ್ಲಿ ಅಧಿಸೂಚನೆ ಹೊರಡಿಸಲಾಯಿತು. ಉಲ್ಲೇಖ (03)ರಲ್ಲಿ ಡಾ. ವಿ.ಆರ್. ದೇವರಾಜ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಸ್ನಾತಕೋತ್ತರ ಜೀವರಸಾಯನ ಶಾಸ್ತ್ರ ಅಧ್ಯಯನ ವಿಭಾಗ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಇವರು ಸೆಂಟ್ರಲ್ ಕಾಲೇಜಿನ ಹಿರಿಮೆ ಮತ್ತು ಐತಿಹಾಸಿಕ ಪರಂಪರೆಗೆ ಧಕ್ಕೆಯಾಗದಂತೆ "ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ನಾಮಕರಣವನ್ನು ಹಿಂಪಡೆದು "ಸೆಂಟ್ರಲ್ ಕಾಲೇಜು ಆವರಣ" ಎಂಬ ಹೆಸರಿನಲ್ಲಿಯೇ ಮುಂದುವರೆಸುವಂತೆ ಪತ್ರದ ಮೂಲಕ ಕೋರಿರುತ್ತಾರೆ. ಉಲ್ಲೇಖ (04)ರಲ್ಲಿ ಸಿಂಡಿಕೇಟ್ ಸಭೆಯ ನಿರ್ಣಯದಂತೆ "ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ನಾಮಕರಣವನ್ನು ಮರು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿಯನ್ನು ರಚಿಸಲಾಯಿತು. ದಿನಾಂಕ 22.04.2026 ಮತ್ತು 18.06.2026ರಂದು ಸಮಿತಿಯು ಸಭೆಯನ್ನು ನಡೆಸಿ ಸಮಿತಿಯ ನಡವಳಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತದೆ. ಸದರಿ ನಡವಳಿಯನ್ನು ದಿನಾಂಕ 01.08.2026 ರಂದು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿ ಉಲ್ಲೇಖ(06)ರಲ್ಲಿ ದಿನಾಂಕ 01.08.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

"ದಿನಾಂಕ 28.02.2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ ಅಧಿಸೂಚನೆ ಹೊರಡಿಸಿದಂತೆ ವಿಶ್ವವಿದ್ಯಾನಿಲಯದ ಆವರಣದ ಹೆಸರನ್ನು "ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಎಂದು ಮುಂದುವರೆಸುವುದು".

ದಿನಾಂಕ 01.08.2026ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕೆಳಗಿನಂತೆ ಅಧಿಸೂಚನೆ ಹೊರಡಿಸಲಾಗಿದೆ.

## ಅಧಿಸೂಚನೆ

**ಸಂಖ್ಯೆ:ಡಿ.ಎಂ.ಎಸ್.ಬಿ.ಸಿ.ಯು.ಬೆಂ./ಸಿಬ್ಬಂದಿ/ಜ್ಞಾ.ಜ್ಯೋ.ಸೆಂ.ಕಾ.ಕ್ಯಾ./2026–27** **ದಿನಾಂಕ:11.09.2026.**

ಮೇಲಿನ ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ 01.08.2026 ರಂದು ಜರುಗಿದ 39ನೇ ಸಿಂಡಿಕೇಟ್ ಸಾಮಾನ್ಯ ಸಭೆಯು ದಿನಾಂಕ 28.02.2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ ದಿನಾಂಕ 21.03.2024 ರಂದು ಉಲ್ಲೇಖಿತ(01)ರಲ್ಲಿ ಅಧಿಸೂಚನೆ ಹೊರಡಿಸಿದಂತೆ ಆವರಣದ ಹೆಸರನ್ನು "ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್" ಎಂದು ಮುಂದುವರೆಸಲು ಹಾಗೂ ಇದೇ ಹೆಸರಿನಿಂದ ಮುಂದೆ ಕರೆಯಲಾಗುವುದು ಎಂದು ಅಧಿಸೂಚಿಸಲಾಗಿದೆ.

ಕುಲಸಚಿವರು

ಕುಲಸಚಿವರು (ಪ್ರ)
ಡಾ. ಮನಮೋಹನ್ ಸಿಂಗ್
I/c ಬೆಂಗಳೂರು ನಗರ ವಿಶ್ವವಿದ್ಯಾಲಯ
ಬೆಂಗಳೂರು - 560 001

ಗೆ,

01. ವಿಶ್ವವಿದ್ಯಾನಿಲಯದ ಎಲ್ಲಾ ಪ್ರಾಧಿಕಾರದ ಸದಸ್ಯರುಗಳಿಗೆ.
02. ವಿಶ್ವವಿದ್ಯಾನಿಲಯದ ಎಲ್ಲಾ ಡೀನರು/ವಿಭಾಗಗಳ ಮುಖ್ಯಸ್ಥರುಗಳಿಗೆ.
03. ವಿಶ್ವವಿದ್ಯಾನಿಲಯದ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ.

ಪ್ರತಿ:

01. ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
02. ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ(ತಾಂತ್ರಿಕ) ಇಲಾಖೆ, ಕರ್ನಾಟಕ ಸರ್ಕಾರ.
03. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
04. ಉಪ-ಕಾರ್ಯದರ್ಶಿಗಳು, ಉನ್ನತ ಶಿಕ್ಷಣ (ವಿಶ್ವವಿದ್ಯಾನಿಲಯಗಳು) ಇಲಾಖೆ, ಕರ್ನಾಟಕ ಸರ್ಕಾರ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
06. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳಿಗೆ.
07. ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
08. ಎಲ್ಲಾ ಪತ್ರಿಕಾ ಮಾಧ್ಯಮಗಳ ಸಂಪಾದಕರು (ವರದಿಗಾರರಿಗೆ).
09. ವಿಶ್ವವಿದ್ಯಾನಿಲಯದ ವೆಬ್-ಸೈಟ್‌ನಲ್ಲಿ ದಾಖಲಿಸಲು ಸಂಬಂಧಪಟ್ಟವರಿಗೆ.